ಈ) ಸಿಂಧನೂರು –ಮಸ್ಕಿ ರಸ್ತೆಗೆ ರೂ. 56.00 ಲಕ್ಷಗಳು ಹಾಗೂ ಸಿಂಧನೂರು – ತಿರುವಿಹಾಳ್ ರಸ್ತೆಗೆ ರೂ. 130.48 ಲಕ್ಷಗಳು.

ಉ) ದಿನಾಂಕ: 31.3.2010 ರೊಳಗಾಗಿ ಪೂರ್ಣಗೊಳಿಸ ಲಾಗುವುದು.

ಊ) ದಿನಾಂಕ: 31.3.2010 ರೊಳಗಾಗಿ ಪೂರ್ಣಗೊಳಿಸ ಲಾಗುವುದು.

ಸಹಾಯ ಧನ ವಿತರಣೆ

1019 (793) ಶ್ರೀ ನರಸಿಂಹ ಸ್ವಾಮಿ ಜಿ. (ದೊಡ್ಡಬಳ್ಳಾಪುರ) : ಮಾನ್ಯ ತೋಟಗಾರಿಕೆ ಮತ್ತು ಬಂಧಿಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2009–10ನೇ ಸಾಲಿನಲ್ಲಿ ತೋಟಗಾರಿಕೆ ಇಲಾಖೆ ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಹನಿ ನೀರಾವರಿ ಅಳವಡಿಸಲು ರೈತರಿಂದ ಬಂದಿರುವ ಸಹಾಯಧನದ ಅರ್ಜಿಗಳು ಎಷ್ಟು? ಈವರೆಗೆ ಬಿಡುಗಡೆಯಾಗಿರುವ ಸಹಾಯಧನದ ಮೊತ್ತ ಎಷ್ಟು? ಬಾಕಿ ಉಳಿದಿರುವ ರೈತರ ಸಹಾಯಧನದ ಅರ್ಜಿಗಳಿಗೆ ಸರ್ಕಾರ ಕೈಗೊಂಡಿರುವ ಕ್ರಮ ಏನು?

ಆ) ಬೆಂಗಳೂರು ಗ್ರಾಮಾಂತರ ಜಿಲ್ಲಾ ರೈತರಿಗೂ ಸಹ ಶೇ.100 ರಷ್ಟು ಸಹಾಯಧನ ನೀಡಲು ಸರ್ಕಾರಕ್ಕೆ ಇರುವ ತೊಡಕೇನು?

ಇ) ರೈತರಿಗೆ ಪೂರೈಸುವ ಸಹಾಯಧನದಲ್ಲಿ ಕೀಟನಾಷಕ, ಕ್ರಿಮಿನಾಷಕ ಹಾಗೂ ಆಧುನಿಕ ಕೃಷಿ ಉಪಕರಣಗಳಿಗಾಗಿ ರೈತರ ಬೇಡಿಕೆಗೆ ಸರ್ಕಾರ 2009–10ನೇ ಸಾಲಿಗೆ ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಬಿಡುಗಡೆ ಮಾಡಿರುವ ಹಣ ಎಷ್ಟು ಹಾಗೂ ಬೇಡಿಕೆ ಎಷ್ಟು?

ಈ) ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಯಡಿಯಲ್ಲಿ ದೊಡ್ಡಬಳ್ಳಾಪುರ ತಾಲ್ಲೂಕಿನ ಎಷ್ಟು ರೈತರು ಅರ್ಜಿ ಸಲ್ಲಿಸಿರುತ್ತಾರೆ. ಈವರೆವಿಗೂ ಈ ಯೋಜನೆಯಡಿಯಲ್ಲಿ ಅನುಷ್ಠಾನ ಗೊಳಿಸಲು ಎಷ್ಟು ರೈತರನ್ನು ಆಯ್ಕೆ ಮಾಡಲಾಗಿದೆ. ಉಳಿದ ರೈತರನ್ನು ಈ ಯೋಜನೆಗೆ ಒಳಪಡಿಸಲು ಬೇಕಾದ ಹಣ ಪೂರೈಕೆ ಇದೆಯೇ?

ಶ್ರೀ ಉಮೇಶ್ ವಿ. ಕತ್ತಿ (ತೋಟಗರಿಕೆ ಮತ್ತು ಬಂಧಿಖಾನೆ ಸಚಿವರು) :

ಅ) 715 ಅರ್ಜಿಗಳು ರೂ.178.00 ಲಕ್ಷಗಳ ಸಹಾಯಧನ ಕೋರಿ ಬಂದಿರುತ್ತವೆ.

ಈವರೆಗೆ 384 ಅರ್ಜಿಗಳಿಗೆ ರೂ.81.90 ಲಕ್ಷಗಳು ಬಿಡುಗಡೆಯಾಗಿರುತ್ತದೆ.

ಬಾಕಿ ಉಳಿದಿರುವ 331 ಅರ್ಜಿಗಳಿಗಾಗಿ ರೂ. 95.06 ಲಕ್ಷಗಳು ಬೇಕಾಗಿದ್ದು, ಭಾರತ ಸರ್ಕಾರಕ್ಕೆ ಅನುದಾನ ಬಿಡುಗಡೆಗಾಗಿ ಪ್ರಸ್ತಾವನೆ ಸಲ್ಲಿಸಲಾಗಿದೆ.

ಆ) ಚಾಲ್ತಿಯಲ್ಲಿರುವ ಆದೇಶದನ್ವಯ ಬೆಂಗಳೂರು ಗ್ರಾಮಾಂತರ ಜಿಲ್ಲಾ ರೈತರಿಗೆ ಶೇಕಡಾ 100 ರ ಸಹಾಯಧನ ನೀಡಲು ಬರುವುದಿಲ್ಲ.

ಇ) ಕೀಟನಾಷಕ ಹಾಗೂ ಕ್ರಿಮಿನಾಷಕ ಔಷಧಿಗಳಿಗೆ ಬೇಡಿಕೆಗೆ ಅನುಗುಣವಾಗಿ ರೂ. 5.80 ಲಕ್ಷಗಳ ಅನುದಾನ ಬಿಡುಗಡೆಯಾಗಿರುತ್ತದೆ. ಆಧುನಿಕ ಕೃಷಿ ಉಪಕರಣಗಳಿಗಾಗಿ ರೂ.4.53 ಲಕ್ಷಗಳು ಬಿಡುಗಡೆಯಾಗಿರುತ್ತದೆ. ಇನ್ನೂ ರೂ.1.10 ಲಕ್ಷಗಳ ಬೇಡಿಕೆ ಇರುತ್ತದೆ.

ಈ) ಒಟ್ಟು 140 ರೈತರು
63 ರೈತರನ್ನು ಆಯ್ಕೆ ಮಾಡಲಾಗಿದೆ.
ಹಣದ ಪೂರೈಕೆ ಇದೆ.

ಬೆಳೆ ನಾಶಕ್ಕೆ ವಿಮೆ ಮತ್ತು ಪರಿಹಾರ

1020 (1443) ಶ್ರೀ ನಾರಾಯಣಸ್ವಾಮಿ ಎಂ. (ಬಂಗಾರ ಪೇಟೆ) : ಮಾನ್ಯ ತೋಟಗಾರಿಕೆ ಮತ್ತು ಬಂಧಿಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋಲಾರ ಜಿಲ್ಲೆಯಲ್ಲಿ ಪ್ರಸಕ್ತ ಸಾಲಿನಲ್ಲಿ ರೈತರು ಕಷ್ಟಪಟ್ಟು ಬೆಳೆದಿದ್ದ ಆಲೂಗಡ್ಡೆ ಮತ್ತು ಟೊಮ್ಯಾಟೋ ಬೆಳೆಗಳಿಗೆ ಅಂಗಮಾರಿ ರೋಗ ತಗುಲಿ ಬೆಳೆಗಳು ನಾಶವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ದಿಸೆಯಲ್ಲಿ ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ, ಬೆಳೆ ಕಳೆದುಕೊಂಡು ಆರ್ಥಿಕ ಸಂಕಷ್ಟಕ್ಕೆ ಸಿಲುಕಿರುವ ರೈತರಿಗೆ ಇಲ್ಲಿಯವರೆಗೆ ಎಷ್ಟು ಪರಿಹಾರವನ್ನು ನೀಡಿದೆ;